**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.209–2015**

| | | |
|---|---|---|
| ಹೆಸರು | ಮಂಜುನಾಥ | ಪ್ರಾ.ಸಾ.1 |
| ತಂದೆಯ ಹೆಸರು | ಪಾಪಣ್ಣ | ಚಾ.ಸಾ.1 |
| ವಯಸ್ಸು | 48ವರ್ಷ | |
| ಕೆಲಸ | ವ್ಯಾಪಾರ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶಿವನಾಪುರ | ದಿ:–20–6–2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ–**

ಮೃತ ಪ್ರಭು ಕುಮಾರ ನನ್ನ ತಮ್ಮ. ಚಾ.ಸಾ. 2 ನನ್ನ ತಮ್ಮನ ಸ್ನೇಹಿತ, ಚಾ.ಸಾ. 3 ರಿಂದ 5 ನನಗೆ ಗೊತ್ತು. ದಿ: 2013ನೇ ಸಾಲಿನಲ್ಲಿ ಮಧ್ಯಾಹ್ನ 2.15 ಸಮಯದಲ್ಲಿ ಅತಿವಟ್ಟ ಗೇಟ ಬಳಿ ನಾನು ನಿಂತುಕೊಂಡಿದ್ದಾಗ ನನ್ನ ತಮ್ಮ ಮತ್ತು ಚಾ.ಸಾ. 2 ರವರು ಮೋಟರು ಸೈಕಲ್ ನಲ್ಲಿ ಕೋಲಾರದ ಕಡೆ ಹೋಗುತ್ತಿದ್ದರು . ಆಗ ಹಿಂದೆಯಿಂದ ಒಂದು ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅದರ ಚಾಲಕ ಅತೀ ವೇಗವಾಗಿ ಚಾಲನೆ ಮಾಡಿಕೊಂಢು ಬಂದು ಹಿಂದೆಯಿಂದ ಮೋಟರು ಸೈಕಲ್ ಗೆ ಡಿಕ್ಕೆ ಹೊಡಿಸಿದ್ದರ ಪರಿಣಾಮ ಅಪಘಾತವಾಗಿ ಮೋಟರು ಸೈಕಲ್ ನಲ್ಲಿದ್ದ ವ್ಯಕ್ತಿ ಕೆಳಗಡೆ ಬಿದ್ದು , ನನ್ನ ತಮ್ಮನಿಗೆ ತಲೆಗೆ ಮತ್ತು ಕಾಲುಗಳಿಗೆ ತೀವ್ರ ಸ್ವರೂಪದ ಗಾಯವಾಗಿದ್ದವು. ಚಾ.ಸಾ. 2 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದವು. ಅವರನ್ನು ಕರೆದುಕೊಂಡು ಹೊಸಕೋಟೆ. ಎಂ.ವಿ.ಜೆ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಗ ವೈದರು ಪರಿಕ್ಷಿಸಿ ಪ್ರಭು ಕುಮಾರರವರು ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಆ ನಂತರ ನಾನು ಪೊ.ಠಾಣೆಗೆ ಹೋಗಿ ದೂರು ನೀಡಿರುತ್ತಳೇನೆ. ಅದನ್ನು ನೋಡಿ ಗುರುತಿಸುತ್ತೇನೆ. ದೂರನ್ನು ನಿಪಿ. 1 ಸಾಕ್ಷಿ ಸಹಿಯನ್ನು ನಿಪಿ. 1(ಎ) ಎಂದು ನಿಶಾನಿಸಲಾಯಿತು. ದೂರು ಪಡೆದ ಪೊಲೀಸರು ಸ್ಥಳಕ್ಕೆ ಹೋಗಿ ಮಹಜರು ಕ್ರಮ ಜರುಗಿಸಿ ಸ್ಥಳದಲ್ಲಿದ್ದ ಸಂಖ್ಯೆಯ 7065 ಮೋಟರ ಸೈಕಲ್ ಮತ್ತು ಕೆ.ಎ–07–ಎಫ–1671 ಸಂಖ್ಯೆಯಕೆ.ಎಸ್. ಆರ್.ಟಿ.ಸಿ ಬಸ್ಸನ್ನು ಅಮಾನತ್ತುಪಡಿಸಕೊಂಡಿರುತಾರೆ. ಮಹಜರನ್ನು ನಿಪಿ. 2ಸಾಕ್ಷಿ ಸಹಿಯನ್ನು ನಿಪಿ. 2(ಎ) ಎಂದು ನಿಶಾನಿಸಲಾಯಿತು. ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಅಪಘಾತ ಸಮಯದಲ್ಲಿ ವಾಹನ ಚಾಲನೆ ಮಾಡುತ್ತಿದ್ದ ವ್ಯಕ್ತಿಯನ್ನು ನೋಡಿಲ್ಲ. ಬಸ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ</u>**

ನಾವು ನಿಂತಿದ್ದ ಸ್ಥಳಕ್ಕು ಅಪಘಾತವಾದ ಸ್ಥಳಕ್ಕೆ 15 ಅಡಿ ಆಗುತ್ತದೆ. ಉಸ್ತೆಯ ಎಡಭಾಗದಲ್ಲಿ ನಾನು ನಿಂತುಕೊಂಡಿದ್ದೆ. ನಾನು ಮತ್ತು ಚಾ.ಸಾ. 3 ರವರು ಇದ್ದೇವು. ಅಪಘಾತವಾದ ಸ್ಥಳದ ರಸ್ತೆ 24 ಅಡಿ ಹಗಲ ಇರುತ್ತದೆ. ಅಪಘಾತವಾಗಿ ಬಿದ್ದಿದಾಗ ಬೈಕ ಮತ್ತು ಬಸ್ಸಿನ ಅಂತರ ಎಷ್ಟಿತ್ತು ಎಂದು ಹೇಳಲಾಗುವುದಿಲ್ಲ. ರಸ್ತೆ ಮಧ್ಯೆ ಡಿವೈಡರ್ ಇದೆ ಎಂದರೆ ಸರಿ. ಅಲ್ಲಿ ಡಿವೈಡರ್ ಕ್ರಾಸಾಗಿದೆ ಎಂದರೆ ಸರಿ. ಅಪಘಾತ ಯಾವ ರೀತಿ ಆಯಿತು ಎಂದು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ರಸ್ತೆಯ ಬಲಭಾಗದಲ್ಲಿ ಬಸ್ಸಿನ ಎಡಕ್ಕೆ ಬೈಕು ಬಿದ್ದಿತ್ತು. ಬೈಕಿನ ಹಿಂಬದಿ ಮತ್ತು ಬಸ್ಸಿನ ಮುಂದಿನ ಭಾಗ ಹಾನಿಯಾಗಿತ್ತು. ಬಸ್ಸಿನ ಮುಂಭಾಗದ ಬಲಭಾಗದಲ್ಲಿ ಹಾನಿಯಾಗಿತ್ತು.

ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವಾಗ ನನ್ನ ಹೊರತು ಬೇರೆ ಯಾರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಹೊರತು ಬೇರೆ ಯಾರು ಸಹಿ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಅಪಘಾತ ಪರಿಹಾರದ ಸಲುವಾಗಿ ಅರ್ಜಿ ಸಲ್ಲಸಿದ್ದೇವೆ ಎಂದರೆ ಸರಿ. ಆ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.209-2015**

| | | |
|---|---|---|
| ಹೆಸರು | ಲೋಕೇಶ | ಪ್ರಾ.ಸಾ.2 |
| ತಂದೆಯ ಹೆಸರು | ಚಿನ್ನಪ್ಪ | ಚಾ.ಸಾ.2 |
| ವಯಸ್ಸು | 42ವರ್ಷ | |
| ಕೆಲಸ | ಕೂಲಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶಿವನಾಪುರ | ದಿ:-20-6-2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ಮೃತ ಪ್ರಭು ಕುಮಾರ ನನ್ನ ಸ್ನೇಹಿತ. ಈಗ ಸುಮಾರು 5 ವರ್ಷಗಳ ಹಿಂದೆ ನಾನು ಮತ್ತು ಮೃತ ವ್ಯಕ್ತಿ ಮೋಟರು ಸೈಕಲ್ ನಲ್ಲಿ ಹೊಸಕೋಟೆಯಿಂದ-ಕೋಲಾರದ ಕಡೆಗೆ ಹೋಗುತ್ತಿದ್ದಾಗ ನಾನು ದ್ವಿಚಕ್ರ ವಾಹನ ಓಡಿಸುತ್ತಿದೆ. ಆಗ ಹಿಂದೆಯಿಂದ ಒಂದು ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅದರ ಚಾಲಕ ಅತೀ ವೇಗವಾಗಿ ಚಾಲನೆ ಮಾಡಿಕೊಂಢು ಬಂದು ಹಿಂದೆಯಿಂದ ನಾವು ಹೋಗುತ್ತಿದ್ದ ಮೋಟರು ಸೈಕಲ್ ಗೆ ಡಿಕ್ಕೆ ಹೊಡಿಸಿದ್ದರ ಪರಿಣಾಮ ಅಪಘಾತವಾಗಿ ಮೋಟರು ಸೈಕಲ್‌ನಿಂದ ನಾನು ಮತ್ತು ಮೃತ ವ್ಯಕ್ತಿ ಎಂಬುವವರು ಕೆಳಗಡೆ ಬಿದ್ದು , ನನಗೆ ಕೈ ಮತ್ತು ಕಾಲುಗಳಿಗೆ ಹಾಗೂ ಬಲಭುಜಕ್ಕೆ ಗಾಯವಾಗಿರುತ್ತದೆ. ಮೃತ ವ್ಯಕ್ತಿಗೆ ಕಾಲಿಗೆ ಮತ್ತು ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದವು.ಎಂ.ವಿ.ಜೆ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆಯಲ್ಲಿ ಮೃತಪಟ್ಟಿರುತ್ತಾರೆ. ಸದರಿ ಅಪಘತವು ಬಸ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ನಾವು ಆ ದಿನ ಬಸ್ ಚಾಲನೆ ಮಾಡುತ್ತಿದ್ದ ವ್ಯಕ್ತಿಯನ್ನು ನೋಡಿರಲಿಲ್ಲ. ಈ ವಿಚಾರವಾಗಿ ನಾನು ತನಿಖಾಧೀಕಾರಿಯ ಮುಂದೆ ಹೇಳಿಕೆಯನ್ನು ನೀಡಿದ್ದೇನೆ. ಅಪಘಾತಕ್ಕೆ ಒಳ ಪಟ್ಟ ವಾಹನಗಳನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಎಪಿಪಿ ರವರಿಂದ**

ನಾನು ದಿ: 28.10.2013 ರಂದು ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ನಾವು ಹೋಗುತ್ತಿದ್ದ ಮೋಟರು ಸೈಕಲ್ ಗೆ ಡಿಕ್ಕಿ ಪಡಿಸಿದ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಆರೋಪಿಯೇ ಚಾಲನೆ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ದಿನ ನಾನು ಬಸ್

ಆರೋಪಿಯೇ ಚಾಲನೆ ಮಾಡುತ್ತಿದ್ದುದ್ದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ಬಸ್ ಚಾಲನೆ ಮಾಡಿದುನ್ನು ನೋಡಿದರು ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನನಗೆ ಮದ್ಯ ಪಾನ ಮಾಡುವ ಹವ್ಯಾಸವಿದೆ ಎಂದರೆ ಸರಿ. ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಿಗೆ ಇದೆ. ಆದರೆ ಈಗ ಕಳೆದು ಹೋಗಿರುತ್ತದೆ. ಆ ದಿನ ನಾವು ಮಧ್ಯಾಹ್ನ 2.45 ಸಮಯಕ್ಕೆ ಹೊಸಕೋಟೆ ಬಿಟ್ಟೆವು. ವಾಹನಗಳ ಸಂಖ್ಯೆ ಹೇಳಲಾಗುವುದಿಲ್ಲ. ಅತ್ತಿವಟ್ಟ ಗೇಟ್ ಬಳಿ ಕ್ರಾಸ ಇದೆ ಎಂದರೆ ಸರಿ. ಲ್ಲಿ ರಸ್ತೆ 25–30 ಅಡಿ ಹಗಲ ಇದೆ. ರಸ್ತೆ ಮಧ್ಯೆದಲ್ಲಿ ಡಿವೈಡರ್ ಇದೆ ಎಂದರೆ ಸರಿ. ಅಲ್ಲಿ ಡಿವೈಡರ್ ಕ್ರಾಸಾಗಿದೆ ಎಂದರೆ ಸರಿ. ನಾವು ಬಸ್ಸಿಗಿಂತ ಸುಮಾರು 50 ಅಡಿ ಮುಂದೆ ಹೋಗುತ್ತಿದ್ದೇವು. ಆಗ ಬಸ್ ಅತಿ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಅಪಘಾತವುಂಟು ಮಾಡಿರುತ್ತಾನೆ. ನಾವೇ ಮೋಟರ್ ಸೈಕಲ್ ನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಢು ಹೋಗಿ ರಸ್ತೆಯ ಡಿವೈಡರ್ ಗೆ ಡಿಕ್ಕಿ ಹೊಡಿಸಿದೆವು ಎಂದರೆ ಸರಿಯಲ್ಲ. ಆ ಕಾರಣದಿಂದ ಪ್ರಭು ಮೃತ ಪಟ್ಟ ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೋ ಇಲ್ಲವೋ ಎಂದು ಈಗ ನೆನಪಿಲ್ಲ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.209-2015**

| | | |
|---|---|---|
| ಹೆಸರು | ರಮೇಶ | ಪ್ರಾ.ಸಾ.3 |
| ತಂದೆಯ ಹೆಸರು | ಚೆನ್ನಮರಿಯಪ್ಪ | ಚಾ.ಸಾ.3 |
| ವಯಸ್ಸು | 41ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಚಿಕ್ಕನಹಳ್ಳಿ | ದಿ:-20-6-2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ಮೃತ ಪ್ರಭು ಕುಮಾರ ಗೊತ್ತು. ಚಾ.ಸಾ. 1 ಮತ್ತು 2 ಪರಿಚಯವಿದೆ. ಈಗ ಸುಮಾರು 3-4 ವರ್ಷಗಳ ಹಿಂದೆ ನಾನು ಮತ್ತು ಮೃತ ವ್ಯಕ್ತಿ ಮೋಟರು ಸೈಕಲ್ ನಲ್ಲಿ ಹೊಸಕೋಟೆಯಿಂದ-ಕೋಲಾರದ ಕಡೆಗೆ ಹೋಗುತ್ತಿದ್ದಾಗ ಅತ್ತಿವಟ್ಟ ಗೇಟ್ ಬಳಿ ಬಸ್ ಮತ್ತು ದ್ವಿಚಕ್ರ ವಾಹನ ಅಪಘಾತವಾಗಿತ್ತು. ಸದರಿ ಅಪಘಾತದಲ್ಲಿ ಪ್ರಭು ಎಂಬುವವರು ಮೃತಪಟ್ಟಿರುತ್ತಾರೆ. ಸದರಿ ಅಪಘಾತವು ಬಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ಬಸ್ ಚಾಲಕ ಸ್ಥಳದಲ್ಲಿರಲಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಎಪಿಪಿ ರವರಿಂದ**

ನಾನು ದಿ: 5.11.2013 ರಂದು ಅಪಘಾತವನ್ನು ಕಣ್ಣಾರೆಯಾಗಿ ನೋಡಿದ್ದೇನೆಂದು ಮತ್ತು ಅಪಘಾತದ ಸಮಯದಲ್ಲಿ ಆರೋಪಿಯೇ ಬಸ್ ಚಾಲನೆ ಮಾಡುತ್ತಿದ್ದ ಎಂಬ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಅಪಘಾತವಾದಾಗ ನಾನು ಹೊಸಕೋಟೆಯಿಂದ ಹೋಗುತ್ತಿದ್ದೆ. ಅಪಘಾತವನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.209-2015**

| | | |
|---|---|---|
| ಹೆಸರು | ಮುನಿಯಪ್ಪ | ಪ್ರಾ.ಸಾ.4 |
| ತಂದೆಯ ಹೆಸರು | ಅಪ್ಪಾಜಪ್ಪ | ಚಾ.ಸಾ.4 |
| ವಯಸ್ಸು | 39ವರ್ಷ | |
| ಕೆಲಸ | ಕೂಲಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶಿವನಾಪುರ | ದಿ:-20-6-2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಿಪಿ. 2 ರಲ್ಲಿರುವ ಸಹಿ ನನ್ನದು. ಅದನ್ನು ನಿಪಿ. 2(ಬಿ) ಎಂದು ನಿಶಾನಿಸಲಾಗಿತ್ತು. ಸದರಿ ಸಹಿಯನ್ನು ಈಗ ಸುಮಾರು 3-4 ವರ್ಷಗಳ ಹಿಂದೆ ಅತ್ತಿವಟ್ಟ ಗೇಟ್ ಬಳಿ ಅಪಘಾತದಲ್ಲಿ ಪ್ರಭು ಕುಮಾರ್ ಎಂಬುವವರು ಮೃತಪಟ್ಟಿರುವ ವಿಚಾರವಾಗಿ ಸ್ಥಳ ಮಹಜರು ಕ್ರಮ ಜರುಗಿಸುತ್ತಿದ್ದು, ಮಹಜರಿಗೆ ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಎಪಿಪಿ ರವರಿಂದ**

ನಾನು ದಿ: 28.10.2013 ರಂದು ಸಂಜೆ. 4.45-5.30 ವರೆಗೆ ಪೊಲೀಸರು ಮಹಜರು ಕ್ರಮ ಜರುಗಿಸಿ ಸ್ಥಳದಲ್ಲಿದ್ದ ಬಸ್ ಮತ್ತು ಮೋಟರು ಸೈಕಲ್ ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಿಪಿ. 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರು ಸಮಯದಲ್ಲಿ ಯಾರು ಯಾರು ಇದ್ದರು ಎಂದು ಹೇಳಲಾಗುವುದಿಲ್ಲ. ನಾನು ನಿಪಿ.2 ಕ್ಕೆ ಪೊ.ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**